# ಏನಿದು ಗಾಜಿನ ಗೋಳ

ತುಮಕೂರಿನ ಶ್ರೀ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜಿನ ಆವಾರಣದಲ್ಲಿ ಒಂದು ಆಕರ್ಷಕ ಕಟ್ಟಡ ನಿರ್ಮಾಣವಾಗಿದೆ! ವಿದ್ಯಾಲಯದ ಗ್ರಂಥಾಲಯದ ಮಹಡಿಯ ಕಟ್ಟಡದ ಹೊರಭಾಗವನ್ನು ಗಾಜಿನಿಂದ ದೊಡ್ಡ ಗೋಳಾಕೃತಿಯನ್ನು ನಿರ್ಮಿಸಿಸಲಾಗಿದೆ. ಅದರ ಒಳ ಹೊಕ್ಕರೆ ಪುಸ್ತಕ ಭಂಡಾರದ ನಿಗೂಢ ಲೋಕವೊಂದು ತೆರೆದುಕೊಳ್ಳುತ್ತದೆ. ಹೊರಮೈಲ್ಮೈ ವಿನ್ಯಾಸವನ್ನು ಮೊದಲ ಬಾರಿ ನೋಡುವವರಿಗೆ ವಿಸ್ಮಯ ಮೂಡಿಸಿದರೂ ಅಚ್ಚರಿ ಇಲ್ಲ.

—ಎಸ್.ಆರ್. ದೇವಪ್ರಕಾಶ್, ತುಮಕೂರು






# ಮನೆ ಮೇಲೆ ಮಾವು

ಹಸುರು ನಮ್ಮೆಲ್ಲರ ಜೀವ. ಅದೇ ನಮ್ಮ ಉಸಿರು. ಪ್ರಕೃತಿಯ ಸಾನ್ನಿಧ್ಯವನ್ನು ಮನಸ್ಸು ಸದಾ ಬಯಸುತ್ತದೆ. ಹಾಗಾಗಿಯೋ ಏನೋ ಕೃಷಿಯ ಖುಷಿಯೇ ಖುಷಿ ಎಂದು ಕೆಲವರು ಹೇಳುವುದನ್ನು ಕೇಳಿದ್ದೇವೆ. ಆ ಖುಷಿಗಾಗಿ ನಾವು ನಮ್ಮ ಮನೆಯಲ್ಲೇ ಒಂದು ಪುಟಾಣಿ ತಾರಸಿತೋಟವನ್ನು ಮಾಡಿಕೊಂಡಿದ್ದೇವೆ. ಮಾವು, ಬಾಳೆ, ನಿಂಬೆ, ತರಕಾರಿ– ಸೊಪ್ಪು ಕೆಲ ಬಗೆಯ ಹೂವು ಬೆಳೆದಿದ್ದೇವೆ. ಜವಾಬ್ದಾರಿಯ ಕೆಲಸವಾದರೂ ಅಲ್ಲಿ ಕಂಗೊಳಿಸುವ ಹೂವು ಹಣ್ಣು ಮನಸಿಗೆ ಮುದ ನೀಡುತ್ತದೆ. ಈಬಾರಿಯ ನಮ್ಮ ಪುಟ್ಟ (ಬಾದಾಮಿ) ಮಾವಿನಮರ ಮೈತುಂಬ ಹೂವು ಹೊತ್ತು ಕಣ್ಮನಗಳನ್ನು ಸೆಳೆಯುತ್ತಿದೆ.

—ಕಲ್ಪನಾ ಪ್ರಸಾದ್

# ಬಣ್ಣದ ನೊಣ

ಬಹು ವರ್ಣಗಳಿಂದ ಶೋಭಿಸುವ ಇದರ ಗಾತ್ರ ನೋಡಿದರೆ ಇದೊಂದು ನೊಣ ಎನ್ನುವುದು ಕಷ್ಟವಾದೀತು ಅಲ್ಲವೆ! ಕಾಡಿನ ಪಕ್ಕದ ಮನೆಗಳ ಬಳಿ ಅಪರೂಪವಾಗಿ ಸುಳಿಯುವ ಇದು ದನಕರುಗಳ ಮೈಮೇಲೇರಿ ರಕ್ತ ಹೀರುತ್ತದೆ. ಮನುಷ್ಯರನ್ನು ಕಂಡರೂ ಕಚ್ಚದೆ ಬಿಡುವುದಿಲ್ಲ. ಈ ಅಪರೂಪದ ರಾಕ್ಷಸ ವೇಷದ ನೊಣ ತೆಂಕಕಾರಂದೂರಿನ ಪದ್ಮನಾಯ್ಕರ ಕೊಟ್ಟಿಗೆಯಲ್ಲಿ ಕಂಡುಬಂತು.

—ಪ. ರಾಮಕೃಷ್ಣಶಾಸ್ತ್ರಿ

